# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

ಸಿ ಸಿ ನಂ:**60/2018**

ಚಾಸಾ**-25/**ಪ್ರಾಸಾ**-5**

ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ:**19.10.2024.**

ಹೆಸರು : ಬಿ.ಕೆ. ಲತಾ ಕೋ ಸುರೇಶ್ ಕುಮಾರ್

ವಯಸ್ಸು : 53 ವರ್ಷ

ಉದ್ಯೋಗ : ಪಿ.ಐ ತುರುವನೂರು ಪೋಲಿಸ್ ಠಾಣೆ, ಚಿತ್ರದುರ್ಗ

ವಿಳಾಸ : ತುರುವನೂರು

ಮುಖ್ಯ ವಿಚಾರಣೆ **:** ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ:

ನಾನು ದಿ:10.07.2016 ರಿಂದ ದಿ:07.03.2019 ರ ವರೆಗೂ ವೃತ್ತ ನಿರೀಕ್ಷಕರು, ಜಗಳೂರು ವೃತ್ತ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ:27.06.2017 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-24 ರಿಂದ ಪಡೆದುಕೊಂಡು ಅದೇ ದಿನಾಂಕದಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿಕೊಟ್ಟು ಚಾಸಾ12 ರಿಂದ 17 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ19 ರವರನ್ನು ಆರೋಪಿ ಮತ್ತು ಮಾಲು ಪತ್ತೆಗಾಗಿ ನೇಮಕ ಮಾಡಿರುತ್ತೇನೆ. ದಿ:29.06.2017 ರಂದು ತುಪ್ಪದಹಳ್ಳಿ ಗ್ರಾಮದ ಚಾಸಾ1 ರವರ ಮನೆಯ ಹತ್ತಿರ ಕೃತ್ಯ ನಡೆದ ಸ್ಥಳದಲ್ಲಿ ನಿಪಿ2 ರಂತೆ ಪಂಚನಾಮೆಯನ್ನು ಚಾಸಾ2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 08.30 ರಿಂದ 09.30 ರವರೆಗೆ ಜರುಗಿಸಿರುತ್ತೇನೆ. ಸದರಿ ಪಂಚನಾಮೆ ಕಾಲಕ್ಕೆ ನಿ.ಪಿ.3 ಮತ್ತು 4 ಪೋಟೋಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ1 ರವರು ತೋರಿಸಿದ ಆರೋಪಿ ಬಿಟ್ಟು ಹೋದ ಬೀಗದ ಕೈಯನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡು ಠಾಣೆಗೆ ಬಂದು ಠಾಣಾ ಪಿ.ಎಫ್.60/2017 ರಂತೆ ಮಾಲು ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಸದರಿ ಬೀಗದ ಕೈಯನ್ನು ನೋಡಿ ಗುರುತಿಸಿದ್ದು, ಸದರಿ ಬೀಗವನ್ನು ಮುಮಾ1 ಎಂದು ಗುರುತಿಸಲಾಗಿರುತ್ತದೆ.

ದಿ:06.07.2017 ರಂದು ಚಾಸಾ19 ರವರು ಠಾಣೆಗೆ ಹಾಜರಾಗಿ ವರದಿ ಮತ್ತು ಆರೋಪಿ ನಂ:1 ರವರ ಹಾಜರುಪಡಿಸಿರುತ್ತಾರೆ. ನಂತರ ನಾನು ಪೋಲೀಸ್ ಠಾಣೆಗೆ ಬಂದು ದೂರನ್ನು ಕೊಟ್ಟಿರುತ್ತೇನೆ.

ಸಾಕ್ಷಿಗೆ ನ್ಯಾಯಾಲಯದ ಕಡತದಿಂದ ಒಂದು ದಾಖಲೆಯನ್ನು ತೋರಿಸಲಾಗಿ, ಸದರಿ ದಾಖಲೆಯಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು, ಸದರಿ ದಾಖಲೆ ವರದಿ ಆಗಿದ್ದು, ಅದನ್ನು ನಿಪಿ**10** ಮತ್ತು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ**10(ಎ)** ಎಂದು ಗುರುತಿಸಲಾಯಿತು. ನಂತರ ಆರೋಪಿಯನ್ನು ವಿಚಾರಿಸಿ ಅವನ ಹೆಸರು ಮತ್ತು ವಿಳಾಸ ಕೇಳಲಾಗಿ ತಾನು ಗೋಪಾಲಪ್ಪ @ ಸಣ್ಣ ಗೋಪಲಾಪ್ಪ ತಂದೆ ತಿಮ್ಮಪ್ಪ @ ಪೂಜಾರಿ ತಿಮ್ಮಪ್ಪ, ವಯಸ್ಸು 52 ವರ್ಷ, ವಾಸ ತುಪ್ಪದಹಳ್ಳಿ ಗ್ರಾಮ ಎಂದು ತಿಳಿಸಿರುತ್ತಾನೆ. ನಂತರ ದಸ್ತಗಿರಿ ಕ್ರಮ ಜರುಗಿಸಿ ಆರೋಪಿಯ ಸ್ವಇಚ್ಛಾ ಹೇಳಿಕೆ ಪಡೆದುಕೊಂಡಿರುತ್ತೇನೆ. ಆರೋಪಿಯೂ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತುಪ್ಪದಹಳ್ಳಿ ಗ್ರಾಮದ ವಿಜಯಕುಮಾರ್ ಇವರ ಮನೆಯಲ್ಲಿ ನಾನು ಮತ್ತು ಬಸವರಾಜ ಸೇರಿ ಕಳವು ಮಾಡಿರುತ್ತೇವೆ ನನ್ನ ಜೊತೆಯಲ್ಲಿ ಬಂದರೆ ಕಳುವು ಮಾಡಿದ ಜಾಗ ಮತ್ತು ಅಡಿಕೆಯನ್ನು ಇಟ್ಟಿರುವ ಜಾಗವನ್ನು ತೋರಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತಾರೆ. ಸಾಕ್ಷಿಗೆ ಈಗ ಓದಿ ಹೇಳಿದ ಹೇಳಿಕೆ ಭಾಗವನ್ನು ನಿಪಿ**11** ಎಂದು ಗುರುತಿಸಲಾಯಿತು. ನಂತರ ಅದೇ ದಿನ ಆರೋಪಿ ಮತ್ತು ಪಂಚರಾದ ಚಾಸಾ6 ಮತ್ತು 7 ರವರೊಡನೆ ಭೀಮಸಮುದ್ರ ಗ್ರಾಮಕ್ಕೆ ಆರೋಪಿ ನಂ:1 ರವರನ್ನು ಕರೆದುಕೊಂಡು ಹೋದಾಗ ಚಾಸಾ10 ರವರು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ ನಂ:1 ಅಡಿಕೆ ಚೀಲವನ್ನು ಬಸವರಾಜಪ್ಪ ರವರ ಮನೆಯಲ್ಲಿ ಇಟ್ಟಿರುವವುದಾಗಿ ಹೇಳಿರುತ್ತಾರೆ. ನಂತರ ಪಂಚರ ಸಮಕ್ಷಮ ನಾವು ಪರಿಶೀಲಸಿದಾಗ ಅಲ್ಲಿ ಒಟ್ಟು 11 ಅಡಿಕೆ ತುಂಬಿದ ಚೀಲಗಳು ಮತ್ತು ಒಂದು ಅರ್ಧ ತುಂಬಿದ ಅಡಿಕೆ ಚೀಲ ಕಾಣಿಸಿರುತ್ತವೆ. ಅವುಗಳನ್ನು ತೂಕ ಮಾಡಿದಾಗ ಒಟ್ಟು 567 ಕೆ ಜಿ ಇರುತ್ತದೆ. ಅದರ ಅಂದಾಜು ಬೆಲೆ ರೂ.2,15,000/- ಇರುತ್ತದೆ. ಅವುಗಳನ್ನು ರಾತ್ರಿ 08.30 ರಿಂದಂ 09.30 ಗಂಟೆಯವರೆಗೆ ಮನೆಯ ಹತ್ತಿರ ದೀಪದ ಬೆಳಿಕಿನ ಸಹಾಯದಿಂದ ಪಂಚನಾಮೆ ಜರುಗಿಸಿ ಫೋಟೋಗಳನ್ನು ತೆಗೆದಿರುತ್ತೇವೆ. ಸದರಿ ಜಪ್ತಿ ಪಂಚನಾಮೆಯನ್ನು ನಿಪಿ12 ಎಂದು , ಸಾಕ್ಷಿಯ ಸಹಿಯನ್ನು ನಿಪಿ12(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿರುವ 04 ಫೋಟೋಗಳನ್ನು ತೋರಿಸಿದ್ದು, ಅವುಗಳನ್ನು ನಿಪಿ13 ರಿಂದ 16 ಎಂದು ಗುರುತಿಸಲಾಯಿತು. ಅದೇ ದಿನ ಠಾಣೆಗೆ ಬಂದು ಠಾಣಾ ಠಾಣಾ ಪಿ.ಎಫ್.61/2017 ರಂತೆ ಮಾಲು ಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ6 ಮತ್ತು 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ10 ರಿಂದ 13 ರವರ

ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ನಮ್ಮ ಸಿಬ್ಬಂದಿಗಳಾದ ಚಾಸಾ21 ರಿಂದ 23 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ07.07.2017 ರಂದು ಆರೋಪಿ ನಂಃ1 ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ನಿಪಿ7 ರಂತೆ ಚಾಸಾ4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 09.30 ರಿಂದ 10.30 ಗಂಟೆಯವರೆಗೆ ಪಂಚನಾಮೆ ಜರುಗಿಸಿ ನಿಪಿ8 ಮತ್ತು 9 ಫೋಟೋಗಳನ್ನು ತೆಗೆದಿರುತ್ತೇನೆ. ಅದೇ ದಿನ ಚಾಸಾ12 ರಿಂದ 18 ರವರ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿ ನಂಃ1 ರವರನ್ನು ವೈದ್ಯಕೀಯ ಪರೀಕ್ಷೆ ಜರುಗಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ಸೂಕ್ತ ಬೆಂಗಾವಲಿನೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿಃ23.07.2017 ರಂದು ಚಾಸಾ1 ರವರು ಪಿ.ಎಫ್.61/2017 ರಲ್ಲಿ ವಶಪಡಿಸಿಕೊಂಡ ಅಡಿಕೆ ಚೀಲಗಳನ್ನು ಮಾನ್ಯ ನ್ಯಾಯಾಲಯದ ಆದೇಶದಂತೆ ಅವರಿಗೆ ಠಾಣೆಯಲ್ಲಿ ಸಂಜೆ 04.30 ರಿಂದ 05.30 ಗಂಟೆಯವರೆಗೆ ನಿಪಿ5 ರಂತೆ ಪಂಚನಾಮೆ ಕ್ರಮ ಜರುಗಿಸಿ ಒಂದು ಕೆಜಿ ಅಡಿಕೆ ಸ್ಯಾಂಪಲ್ ತೆಗೆದು ಚಾಸಾ1 ರವರ ವಶಕ್ಕೆ ನೀಡಿರುತ್ತೇನೆ. ನಿಪಿ5 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ5(ಬಿ) ಎಂದು ಗುರುತಿಸಲಾಯಿತು. ನಂತರ ದಿಃ03.08.2017 ರಂದು ಕಳುವು ಮಾಡಲು ಬಳಸಿದ ಟಾಟಾ ಎಸಿಇ ನಂಃಕೆಎ-7/ಬಿ-5003 ವಾಹನದ ಮಾಲೀಕರಾದ ಚಾಸಾ18 ರವರು ತಂದು ಠಾಣೆಗೆ ಹಾಜರುಪಡಿಸಿದ್ದು, ಅದನ್ನು ಚಾಸಾ8 ಮತ್ತು 9 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.15 ಗಂಟೆಯವರೆಗೆ ಪಂಚನಾಮೆ ಜರುಗಿಸಿ ಚಾಸಾ18 ರವರ ಹೇಳಿಕೆ ಮತ್ತು ವಾಹನದ ದಾಖಲೆಗಳನ್ನು ಪಡೆದು ವಿಮೆ ಇಲ್ಲದ ಕಾರಣ ಮಾಲೀಕರಿಗೆ ರೂ.300/- ದಂಡ ವಿಧಿಸಿ ಅದನ್ನು ಮಾಲೀಕರ ವಶಕ್ಕೆ ಬಿಡುಗಡೆ ಮಾಡಿರುತ್ತೇನೆ. ಈಗ ಸಾಕ್ಷಿಗೆ ನ್ಯಾಯಾಲಯದ ಕಡತದಲ್ಲಿರುವ ಒಂದು ದಾಖಲೆಯನ್ನು ತೋರಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆ ವಾಹನ ಜಪ್ತಿ ಪಂಚನಾಮೆ ಆಗಿದ್ದು, ಅದನ್ನು ನಿ.ಪಿ.17 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.17(ಎ) ಎಂದು ಗುರುತಿಸಲಾಯಿತು. ನಂತರ ದಿಃ14.07.2017 ರಂದು ಆರೋಪಿ ನಂಃ2 ರವರನ್ನು ಪತ್ತೆ ಮಾಡಲು ನಮ್ಮ ಸಿಬ್ಬಂದಿಯಾದ ಪಿಸಿ-100 ಮತ್ತು ಪಿಸಿ-382 ರವರನ್ನು ನೇಮಕ ಮಾಡಿರುತ್ತೇನೆ. ದಿಃ30.08.2017 ರಂದು 2ನೇ ಆರೋಪಿ ಪತ್ತೆಯಾಗದ ಕಾರಣ ಆರೋಪಿಗಳ ವಿರುದ್ಧ ಪ್ರಕರಣ ಸಾಬೀತು ಆದ ಕಾರಣ ನ್ಯಾಯಾಲಯಕ್ಕೆ ಅವರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ. ನಾನು ದಸ್ತಗಿರಿ ಮಾಡಿದ

ಆರೋಪಿ ನಂ:1 ರವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿ ನಂ:1 ರವರನ್ನು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿಯ ಹೆಸರು ವಿಳಾಸ ಆರೋಪಿ ನಂ:1 ರವರ ಕಡೆಯಿಂದ ತಿಳಿದುಕೊಂಡಿರುತ್ತೇನೆ.

ಪಾಟೀ ಸವಾಲು:- ಆರೋಪಿತರ ಪರ ಶ್ರೀ. ಎಲ್.ಯೂ., ವಕೀಲರಿಂದ:-

ನಾನು ಕೃತ್ಯ ನಡೆದ ಚಾಸಾ1 ರವರ ಮನೆಯ ಹತ್ತಿರ ದಿ:29.06.2017 ರಂದು ಬೇಟಿ ಕೊಟ್ಟಿರುತ್ತೇನೆ. ಸದರಿ ಸ್ಥಳಕ್ಕೆ ಬಿಳಿಚೋಡು ಗ್ರಾಮದ ಮಾರ್ಗದ ಮೂಲಕ ಹೋಗಿರುತ್ತೇವೆ. ಕೃತ್ಯ ನಡೆದ ಸ್ಥಳ ಚಾಸಾ1 ರವರಿಗೆ ಸೇರಿರುತ್ತದೆ ಎಂದು ತನಿಖೆಯಲ್ಲಿ ಪರಿಶೀಲನೆ ಮಾಡಿರುತ್ತೇವೆ. ಅದಕ್ಕೆ ಸಂಬಂದಿಸಿದ ಹಾಗೇ ಪಹಣಿಯನ್ನು ಜಗಳೂರು ತಹಶಿಲ್ದಾರ್‌ವರಿಗೆ ನಿವೇದನೆ ಮಾಡಿಕೊಂಡು ಪಡೆದುಕೊಂಡಿರುತ್ತೇವೆ. ಸದರಿ ನಿವೇದನೆ ಪತ್ರವನ್ನು ನಾನು ಅಂತಿಮ ವರದಿಯೊಂದಿಗೆ ಲಗತ್ತಿಸಿರುತ್ತೇನೆ. ಸದರಿ ಪಹಣಿ ಹಾಗೂ ನಿವೇದನೆಯನ್ನು ಅಂತಿಮ ವರದಿಯೊಂದಿಗೆ ಲಗತ್ತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ಇಷ್ಟೇ ತೂಕದ ಅಡಿಕೆ ಇತ್ತು ಎಂದು ನಮಗೆ ಗೊತ್ತಿರುವುದಿಲ್ಲ. ನಿಪಿ2 ಪಂಚನಾಮೆಯಲ್ಲಿ ಕಳುವಾದ ಅಡಿಕೆಯ ತೂಕ 620 ಕೆಜಿ ಇರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯೂ ಚಾಸಾ1 ರವರು ಅದೇ ರೀತಿ ದೂರನ್ನು ನೀಡಿರುತ್ತಾರೆ. ಚಾಸಾ2 ಮತ್ತು 3 ರವರನ್ನು ನಮ್ಮ ಸಿಬ್ಬಂದಿಯವರು ಕರೆದುಕೊಂಡು ಬಂದಿರುತ್ತಾರೆ. ನಿಪಿ2 ನ್ನು ನಮ್ಮ ಸಿಬ್ಬಂದಿ ಬರೆದಿರುತ್ತಾರೆ. ಸದರಿ ಸಿಬ್ಬಂದಿಯ ಸಹಿಯನ್ನು ನಿಪಿ2 ರಲ್ಲಿ ಪಡೆದುಕೊಂಡಿರುವುದಿಲ್ಲ. ಸದರಿಯವರ ಸಹಿ ಪಡೆಯಲು ನಮಗೆ ತೊಂದರೆ ಇರಲಿಲ್ಲ. ನಿಪಿ3 ಮತ್ತು 4 ಪೋಟೋಗಳಲ್ಲಿ ಕಾಣುವವರು ಗಣೇಶ್ ಗುಬ್ಬಿ ಎಂಬ ಪೋಲೀಸ್ ಸಿಬ್ಬಂದಿ ಇರುತ್ತಾರೆ ಎಂದರೆ ಸರಿ. ಅವರೇ ಪಂಚನಾಮೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ನಿಪಿ3 ಮತ್ತು 4 ಪೋಟೋಗಳಲ್ಲಿ ಕಾಣುವವರು ಗಣೇಶ್ ಗುಬ್ಬಿ ಎಂಬ ಪೋಲೀಸ್ ಸಿಬ್ಬಂದಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಾವು ಠಾಣೆಯಿಂದ ನಮ್ಮ ಸಿಬ್ಬಂದಿ ಗಣೇಶ್ ಗುಬ್ಬಿ ಮತ್ತು ವೆಂಕಟೇಶ್‌ರವರೊಂದಿಗೆ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ಕೊಟ್ಟಿರುತ್ತೇವೆ. ನಿಪಿ3 ಮತ್ತು 4 ಪೋಟೋಗಳನ್ನು ನಮ್ಮ ಸಿಬ್ಬಂದಿ ತೆಗೆದಿರುತ್ತಾರೆ. ನಮ್ಮೊಂದಿಗೆ ವೆಂಕಟೇಶ್ ಆ ದಿನ ಹಾಜರು ಇರಲಿಲ್ಲ ಎಂದರೆ ಸರಿಯಲ್ಲ. ನಾವು ನಿಪಿ3 ಮತ್ತು 4 ಬಗ್ಗೆ 65 ಬಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಆರೋಪಿ ನಂ:1 ರವರನ್ನು ನಮ್ಮ ಸಿಬ್ಬಂದಿಯವರು ತುಪ್ಪದಹಳ್ಳಿ ಗ್ರಾಮದ ಅವರ ಮನೆಯಿಂದ ಕರೆದುಕೊಂಡು ಬಂದಿರುತ್ತಾರೆ. ಆರೋಪಿ ನಂ:1 ರವರು ಯಾವುದೇ ಅಪರಾದ ಮಾಡದೇ ಇದ್ದರೂ ಸಹ ಅವರ ಮೇಲೆ ಈ ಪ್ರಕರಣ ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಿಪಿ7 ನ್ನು ಜರುಗಿಸಲು ನಮ್ಮ ಸಿಬ್ಬಂದಿಯೊಂದಿಗೆ ಹೋಗಿರುತ್ತೇವೆ. ನಮ್ಮ ಸಿಬ್ಬಂದಿ ಯಾರು, ಎಷ್ಟು ಜನ ಇದ್ದರು ಎಂದು ನನಗೆ ಈಗ ನೆನಪು ಇರುವುದಿಲ್ಲ. ನಿಪಿ7 ನ್ನು ನಮ್ಮ ಸಿಬ್ಬಂದಿ ವೆಂಕಟೇಶ್ ಬರೆದಿರುತ್ತಾರೆ. ಅವರ ಸಹಿ ಇರುವುದಿಲ್ಲ ಎಂದರೆ ಸರಿ. ನಿಪಿ7 ರಲ್ಲಿ ಅವರ ಸಹಿ ಪಡೆಯಲು ಯಾವುದೇ ತೊಂದರೆ ಇರಲಿಲ್ಲ. ನಿಪಿ8 ಮತ್ತು 9 ರಲ್ಲಿ ಕಾಣುವ ಪೋಲೀಸ್ ಸಿಬ್ಬಂದಿ ಹೆಸರು ಪ್ರಶಾಂತ್ ಇರುತ್ತದೆ. ಸ್ಥಳದಲ್ಲಿ ನಿಪಿ7 ನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ8 ಮತ್ತು 9 ರಲ್ಲಿ ಕಾಣುವ ಮನೆಯೂ ಚಾಸಾ1 ರವರಿಗೆ ಸೇರಿದೆ ಎಂದು ತೋರಿಸಲು ನಾವು ಪಹಣಿಯನ್ನು ಪಡೆದುಕೊಂಡಿರುತ್ತೇವೆ. ನಾವು ಜಗಳೂರು ತಹಶಿಲ್ದಾರ್ ಕಡೆಯಿಂದ ಸದರಿ ಪಹಣಿ ಪಡೆದುಕೊಂಡಿರುತ್ತೇವೆ. ನಾವು ಅಂತಿಮ ವರದಿಯೊಂದಿಗೆ ತಹಶಿಲ್ದಾರ್‌ವರು ದೃಡೀಕರಿಸಿದ ಪಹಣಿ ಮತ್ತು ನಿವೇದನೆ ಪತ್ರ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ8 ಮತ್ತು 9 ಪೋಟೋಗಳನ್ನು ನಮ್ಮ ಸಿಬ್ಬಂದಿ ತೆಗೆದಿರುತ್ತಾರೆ. ನಾವು ನಿಪಿ8 ಮತ್ತು 9 ಬಗ್ಗೆ 65ಬಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ನಿಪಿ12 ನ್ನು ಜರುಗಿಸಲು ನಮ್ಮ ಸಿಬ್ಬಂದಿಯೊಂದಿಗೆ ಹೋಗಿರುತ್ತೇವೆ. ನಮ್ಮ ಸಿಬ್ಬಂದಿ ಯಾರು, ಎಷ್ಟು ಜನ ಇದ್ದರು ಎಂದು ನನಗೆ ಈಗ ನೆನಪು ಇರುವುದಿಲ್ಲ. ನಿಪಿ12 ನ್ನು ನಮ್ಮ ಸಿಬ್ಬಂದಿ ವೆಂಕಟೇಶ್ ಬರೆದಿರುತ್ತಾರೆ. ಅವರ ಸಹಿ ಇರುವುದಿಲ್ಲ. ನಿಪಿ12 ರಲ್ಲಿ ಅವರ ಸಹಿ ಪಡೆಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಸ್ಥಳದಲ್ಲಿ ನಿಪಿ12 ನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ13 ರಿಂದ 16 ಬೆಳಿಗಿನ ಸಮಯದಲ್ಲಿ ತೆಗೆದಿರುತ್ತೇವೆ ಎಂದರೆ ಸರಿಯಲ್ಲ. ನಿಪಿ13 ರಿಂದ 16 ಪೋಟೋಗಳನ್ನು ನಮ್ಮ ಸಿಬ್ಬಂದಿ ತೆಗೆದಿರುತ್ತಾರೆ. ನಾವು ನಿಪಿ13 ರಿಂದ 16 ಬಗ್ಗೆ 65ಬಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಮ್ಮ ಇಲಾಖೆಯಿಂದ ನಮಗೆ ಕ್ಯಾಮೇರಾ ನೀಡಿರುತ್ತಾರೆ. ನಿಪಿ 13 ರಿಂದ 16 ರಲ್ಲಿ ಕಾಣುವ ಮನೆಯೂ ಬಸವರಾಜಪ್ಪರವರಿಗೆ ಸೇರಿದೆ ಎಂದು ತೋರಿಸಲು ನಾವು

ಪಹಣಿಯನ್ನು ಪಡೆದುಕೊಂಡಿರುತ್ತೇವೆ. ನಾವು ಜಗಳೂರು ತಹಶಿಲ್ದಾರ್ ಕಡೆಯಿಂದ ಸದರಿ ಪಹಣಿ ಪಡೆದುಕೊಂಡಿರುತ್ತೇವೆ. ನಾವು ಅಂತಿಮ ವರದಿಯೊಂದಿಗೆ ತಹಶಿಲ್ದಾರ್‌ರವರು ದೃಢೀಕರಿಸಿದ ಪಹಣಿ ಮತ್ತು ನಿವೇದನೆ ಪತ್ರ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಸದರಿ ಬಸವರಾಜಪ್ಪರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ರೀತಿಯ ಹೇಳಿಕೆ ಪಡೆದುಕೊಂಡಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಚಾಸಾ11 ರವರು ಸದರಿ ಬಸವರಾಜಪ್ಪರವರ ಮಗ ಇರುತ್ತಾರೆ ಎಂದು ಹೇಳುತ್ತಾರೆ. ಚಾಸಾ11 ರವರು ಸದರಿ ಬಸವರಾಜಪ್ಪರವರ ಮಗ ಎಂದು ತೋರಿಸಲು ಯಾವುದೇ ದಾಖಲೆ ಪಡೆದುಕೊಂಡಿರುವುದಿಲ್ಲ. ಸದರಿ ಚಾಸಾ11 ರವರನ್ನು ಆರೋಪಿ ಮಾಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ11 ರವರು ನೊಂದಾಯಿತ ಅಡಿಕೆ ದಲ್ಲಾಳಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಡಿಕೆ ಖರೀದಿ ಮಾಡಲು ಯಾವುದೇ ಪರವಾನಗಿಯ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ನಿಪಿ12 ರಲ್ಲಿ 12ನೇ ಚೀಲ ಅರ್ಧ ಚೀಲ ಇದೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಂಶವನ್ನು ನಾನು ನನ್ನ ತನಿಖೆಯಲ್ಲಿ ಇಲ್ಲಿಯೂ ಸಹ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ತಿಳಿಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಟಾಟಾ ಎಸಿಇ ವಾಹನವನ್ನು ಹಾಜರುಪಡಿಸಲು ಚಾಸಾ18 ರವರಿಗೆ ನೋಟೀಸನ್ನು ನೀಡಿರುವುದಿಲ್ಲ. ಆ ರೀತಿ ನೀಡಲು ತೊಂದರಿ ಇರಲಿಲ್ಲ ಎಂದರೆ ಸರಿ. ನಮಗೆ ಆಟೋ ಚಾಲಕರು ಕಳುವಾದ ಅಡಿಕೆಯನ್ನು ಅಸಗೋಡು - ತುಪ್ಪದಹಳ್ಳಿ ಗ್ರಾಮದ ಮಧ್ಯೆ ಇಟ್ಟಿರುವುದಾಗಿ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಅದೇ ಸ್ಥಳದಲ್ಲಿ ಅಡಿಕೆಯನ್ನು ಆಟೋದಲ್ಲಿ ತುಂಬಿಸಿಕೊಂಡು ಹೋಗಿರುತ್ತಾರೆ ಎಂದು ನಿಪಿ17 ರಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಆಟೋ ಚಾಲಕನಿಂದ ನಾವು ಹೇಳಿಕೆ ಪಡೆದುಕೊಂಡಿರುವುದಿಲ್ಲ. ಸದರಿ ಸ್ಥಳದಲ್ಲಿ ನಾವು ಪಂಚನಾಮೆ ಜರುಗಿಸಿ ಫೋಟೋ ತೆಗೆದಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಾವು ಚಾಸಾ8 ಮತ್ತು 9 ರವರನ್ನು ಕಾನನಕಟ್ಟೆ ಗ್ರಾಮದಿಂದ ಕರೆದುಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ಅವರನ್ನು ನಮ್ಮ ಸಿಬ್ಬಂದಿ ಜಗಳೂರಿನಿಂದ ಕರೆದುಕೊಂಡು ಬಂದಿರುತ್ತಾರೆ. ನಿಪಿ17ನ್ನು ನಮ್ಮ ಸಿಬ್ಬಂದಿ ವೆಂಕಟೇಶ್ ಬರೆದಿರುತ್ತಾರೆ. ಅವರ ಸಹಿ ಇರುವುದಿಲ್ಲ. ಅವರ ಸಹಿ ಪಡೆಯಲು ಯಾವುದೇ ತೊಂದರೆ ಇರಲಿಲ್ಲ. ನಿಪಿ17 ರಚಿಸುವ

ಕಾಲಕ್ಕೆ ನಮ್ಮ ಸಿಬ್ಬಂದಿ ವೆಂಕಟೇಶ್‌ರವರು ನಮ್ಮ ಜೊತೆ ಇರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ17 ರಲ್ಲಿ ಕಾಣುವ ಚಾಸಾ18 ರವರ ವಿಳಾಸ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರ ಹೇಳಿಕೆ ಪಡೆದುಕೊಂಡಿರುತ್ತೇವೆ ಎಂದು ಹೇಳುತ್ತಾರೆ. ನಾವು ಈ ಪ್ರಕರಣದಲ್ಲಿ ಹಾಜರುಪಡಿಸಿದ ಕೃತ್ಯ ಸ್ಥಳ ಪಂಚನಾಮೆ ಮತ್ತು ಅಮಾನತು ಪಂಚನಾಮೆಗಳನ್ನು ಠಾಣೆಯಲ್ಲಿ ಜರುಗಿಸಿ ಪಂಚರ ಸಹಿಯನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಕೃತ್ಯಕ್ಕೆ ಸಂಬಂದಿಸಿದ ಎಲ್ಲಾ ವಸ್ತುಗಳನ್ನು ನಾವು ಮುದ್ದೆ ಮಾಲುಗಳಾಗಿ ಪರಿಗಣಿಸುತ್ತೇವೆ ಎಂದರೆ ಸರಿ. ನಾವು ಅಡಿಕೆ ಕಳುವು ಮಾಡಲು ಬಳಸಿದ ಟಾಟಾ ಎಸಿಇ ವಾಹನವನ್ನು ಮುದ್ದೆಮಾಲು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಮುದ್ದೆ ಮಾಲು ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನಾವು ನಿಪಿ11 ರಂತೆ ಸ್ವಇಚ್ಛಾ ಹೇಳಿಕೆಯನ್ನು ಬಲವಂತವಾಗಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಸಾಕ್ಷಿಗಳ ಹೇಳಿಕೆ ಪಡೆದುಕೊಂಡಿರುವುದಿಲ್ಲ, ನಮ್ಮ ತನಿಖೆಗೆ ಅನುಗುಣವಾಗಿ ಹೇಳಿಕೆ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ1 ರವರು ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ1 ರವರು ಕಳುವಾದ ಅಡಿಕೆಗಳು ಹಸಿ ಅಥವಾ ಬೇಯಿಸಿದೆ ಎಂದು ದೂರನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ತನಿಖೆಯಲ್ಲಿ ನಾವು ಕಳುವಾದ ಅಡಿಕೆಯೂ ಹಸಿಯಾದ ಅಡಿಕೆ ಅಥವಾ ಬೇಯಿಸಿದ ಅಡಿಕೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮಾರುಕಟ್ಟೆಗೆ ಎರಡು ರೀತಿ ಅಡಿಕೆಗಳು ಬರುತ್ತವೆ ಒಂದು ಹಸಿ ಮತ್ತು ಬೇಯಿಸಿದ ಅಡಿಕೆ ಇರುತ್ತದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ರೈತರು ಹಸಿ ಅಡಿಕೆಯನ್ನು ಹೊಲದಲ್ಲಿ ಮಾರಾಟ ಮಾಡುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಅಡಿಕೆ ದಲ್ಲಾಳಿಗಳು ಹಸಿ ಅಡಿಕೆಯನ್ನು ಬೇಯಿಸಲು ದೊಡ್ಡದಾಗಿ ಗೋ ಡೌನ್ ಗಳನ್ನು ಇಟ್ಟುಕೊಂಡಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಮೂಮಾ2 ಅಡಿಕೆಗಳು ಬೇಯಿಸಿ ಮಾರಾಟಕ್ಕೆ ಸಿದ್ದವಾದ ಅಡಿಕೆ ಇರುತ್ತವೆ ಎಂದರೆ ಸರಿ. ತುಪ್ಪದಹಳ್ಳಿ ಗ್ರಾಮದಲ್ಲಿ ಮತ್ತು ಸುತ್ತಮುತ್ತ ಅಡಿಕೆ ಬೇಯಿಸಿ ಮಾರಾಟ ಮಾಡುವ ದಲ್ಲಾಳಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಮೂಮಾ2 ಅಡಿಕೆಗೂ ಮತ್ತು ಆರೋಪಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಅಡಿಕೆಯನ್ನು ಬೇರೆ ಕಡೆ ತಂದು ಈ ಪ್ರಕರಣಕ್ಕೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಮೂಮಾ1 ಬೀಗದಲ್ಲಿ ಹೊಡೆದ ರೀತಿ ಕಾಣುವುದಿಲ್ಲ ಎಂದರೆ ಸರಿಯಲ್ಲ. ನಾವು

ಮುಮಾ1 ಬೀಗವನ್ನು ಹೊಡೆಯಲು ಬಳಸಿದ ಪರಿಕರವನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮೂಮಾ1 ಮತ್ತು ಆರೋಪಿಗಳಿಗೆ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಹಾಜರುಪಡಿಸಿದ ಪೋಟೋಗಳು ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ನಂ:1 ರವರನ್ನು ನಮ್ಮ ಸಿಬ್ಬಂದಿ ನಮ್ಮ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ11 ಸ್ವಇಚ್ಚಾ ಹೇಳಿಕೆಗೆ ನಾವೇ ಬಲವಂತವಾಗಿ ನಾವೇ ಸಹಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಭೀಮಸಮುದ್ರದಲ್ಲಿ ಸಿಕ್ಕ ಅಡಿಕೆ ಚೀಲಗಳಿಗೂ ಮತ್ತು ಆರೋಪಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಪ್ರಕರಣಕ್ಕೆ ಅನುಗುಣವಾಗಿ ಹೇಳಿಕೆ ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣದ ಮುದ್ದೆ ಮಾಲುಗಳಿಗೆ ಮತ್ತು ಆರೋಪಿತರಿಗೆ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ರೀತಿ ತನಿಖೆಯನ್ನು ಕೈಗೊಳ್ಳದೇ ಆರೋಪಿತರ ವಿರುದ್ದ ಸುಳ್ಳು ದೋಷರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ ಕೇ ಸರಿ ಇದೆ

ಸಹಿ

ಪ್ರ.ದ.ನ್ಯಾ.ದಂ., ಜಗಳೂರು